ಊರಲ್ಲಿ ನಗೆಪಾಟಲಿಗೀಡಾದರೂ, ಡೋಂಟ್‌ಕೇರ್ ಎನ್ನದೇ ಟೈಟಾಗಿ ಓಡಾಡುವುದು ಹೀಗೆ ನಾನಾ ಅವತಾರಗಳು...! ಈ ಹಲವಾರು ಅವತಾರಗಳಲ್ಲಿ ಗಮನ ಸೆಳೆದು, ಕುತೂಹಲ ಕೆರಳಿಸಿದ್ದು, ಗಿರಿ ಹೇಳಿದ ಸಂಗತಿ: 'ಗಡಿಕಲ್ಲಾಚೆ ಹೋದ್ರೆ ಅಮರೇಂದ್ರ ಬ್ರಾಹ್ಮಣ! ಈಚೆ ಬಂದ್ರೆ ಶೂದ್ರ...' 'ಏನೋ ಹಾಗಂದ್ರೆ?' ಆಶ್ಚರ್ಯದಿಂದ ಪ್ರಶ್ನಿಸಿದೆ. 'ಅವ್ನ ಬಾಯಲ್ಲೇ ಕೇಳ್ಬೇಕು, ಆಗ್ಲೇ ಮಜಾ ಇರೋದು...' ಎಂದಿದ್ದ. ಗಡಿಕಲ್ಲಿಗೂ, ಅಮರೇಂದ್ರನಿಗೂ ಎತ್ತಣದಿಂದ ಎತ್ತಣ ಸಂಬಂಧ? ಶಿವಮೊಗ್ಗ ಚಿಕ್ಕಮಗಳೂರು ಅಕ್ಕಪಕ್ಕದ ಜಿಲ್ಲೆ. ತೀರ್ಥಹಳ್ಳಿ, ಕೊಪ್ಪ ನೆರೆಹೊರೆ ತಾಲೂಕು. ಈ ಜಿಲ್ಲೆ, ತಾಲೂಕುಗಳ ಬೇರ್ಪಡಿಸುವ, ಊರೇ ಗಡಿಕಲ್ಲು! ಎರಡು ಜಿಲ್ಲೆಗಳೂ ಮಲೆನಾಡಿನ ಪ್ರದೇಶಗಳೇ ಆದರೂ ಪ್ರಾದೇಶಿಕವಾಗಿ ಕೆಲವು ಭಿನ್ನತೆಗಳುಂಟು. ಶಿವಮೊಗ್ಗ ಜಿಲ್ಲೆ ಅಡಿಕೆ, ಭತ್ತ, ಕಬ್ಬು ಬೆಳೆ ಪ್ರದೇಶ. ಚಿಕ್ಕಮಗಳೂರು ಕಾಫಿ ಎಸ್ಟೇಟ್ ಗಳಿಗಾಗಿ ಪ್ರಸಿದ್ಧಿ. ಸಾಹಿತ್ಯ, ರಾಜಕೀಯಗಳಲ್ಲೂ ಈ ಜಿಲ್ಲೆಗಳ ವೈಶಿಷ್ಟ್ಯ ಹಲವು. ಈ ವೈವಿಧ್ಯತೆ ಹಿನ್ನೆಲೆಯಲ್ಲಿ, ಸಾಮಾನ್ಯ ಅಮರೇಂದ್ರನ ಅಸಾಮಾನ್ಯ ಅವತಾರದ ರಹಸ್ಯಾತಿರಹಸ್ಯವಾದರೂ ಏನು?

ಉಪ್ಪುಹುಳಿ ಸಿಹಿ ಖಾರ ಬೆರಸಿ ಊರವರು ಹೇಳುವ ಕಥೆಗಳಿಗಿಂತ ಅವನ ಬಾಯಲ್ಲೇ ಅನುಭವದ ವಿವರಕೇಳಲು, ಖುದ್ದು ಭೇಟಿಯಾಗುವ ತವಕದಲ್ಲಿದ್ದೆ. ಅದರೆ ದಟ್ಟಮಳೆಗಾಲದ ಕಾರ್ಮುಗಿಲ ನಡುವೆ ತೂರಿ ಫಕ್ಕನೆ ಮಾರೆಯಾಗುವ ಕೋಲ್ ಬಿಸಿಲಿನಂತೆ ಅವನು ಮರೆಯಾಗಿಬಿಡುವುದೇ...

ನಿವೃತ್ತನಾಗಿ ಊರು ಸೇರಿದ ನನಗೆ ಕುಲಬಾಂಧವರು ಒತ್ತಾಯ ಪೂರ್ವಕವಾಗಿ ಅಂಟಿಸಿದ ಕೆಲಸ ವಂಶವೃಕ್ಷ ತಯಾರಿಸಿಕೊಡೋದು! 'ಯೇ ನಮ್ಮ ಕುಟುಂಬಾಂದ್ರೆ ಸಾಮಾನ್ಯವೇ?

